ತಮ್ಮ ಕೈಯಿಂದಲೇ ಠಾಕೂರರ ಭಾವಚಿತ್ರಕ್ಕೆ ಪೂಜೆ ಮಾಡಿ ಅನ್ನ ನೈವೇದ್ಯವನ್ನು ಮಾಡಿ ಹೇಳಿದ್ದರು: ''ಠಾಕೂರರಿಗೆ ನೈವೇದ್ಯ ನೀಡುವಾಗ ಅವರು ಅದನ್ನು ಸ್ವೀಕರಿಸಿದ್ದನ್ನು ನೋಡಿದೆ.'' ಈ ರೀತಿ ಅವರು ತಮ್ಮ 'ಅನ್ನಪೂರ್ಣಾ-ಸ್ವರೂಪ'ವನ್ನು ಪ್ರಕಟಪಡಿಸಿ, ಈ ಕಾಯಸ್ಥ ಕುಟುಂಬದ ಭಕ್ತರಿಗೆ ಠಾಕೂರರಿಗೆ ಅನ್ನ-ನೈವೇದ್ಯ ಮಾಡುವ ಅಧಿಕಾರವನ್ನು ನೀಡಿದರು. ಅವರ ನಿರ್ದೇಶನದಂತೆ, ಹಾಗೂ ಅಪಾರ ಆಶೀರ್ವಾದದಿಂದ ಈ ಪೂಜೆಯ ಇಂದಿಗೂ ದತ್ತ ಕುಟುಂಬದಲ್ಲಿ ನಡೆದುಕೊಂಡು ಬರುತ್ತಿದೆ. ಈ ಎಲ್ಲ ವಿಷಯಗಳನ್ನು ನನ್ನ ತಂದೆಯವರು ತಮ್ಮ ದಿನಚರಿ ಪುಸ್ತಕದಲ್ಲಿ ಬರೆದಿಟ್ಟದ್ದನ್ನು ಕಾಣಬಹುದು.

ಅಮೆರಿಕಾದ ಹಾಲಿವುಡ್ ಕೇಂದ್ರದ ಹಿಂದಿನ ಅಧ್ಯಕ್ಷರಾಗಿದ್ದ ಸ್ವಾಮಿ ಪ್ರಭವಾನಂದ ಮಹಾರಾಜ್ ಒಂದು ಪತ್ರದಲ್ಲಿ ನನಗೆ ಹೀಗೆ ಬರೆದಿದ್ದರು: 'ಶ್ರೀಮಾತೆಯವರನ್ನು ಕುರಿತು ಒಂದು ವಿಷಯ ತಿಳಿಸುತ್ತೇನೆ. ಪೂಜ್ಯ ಹರಿ ಮಹಾರಾಜರಿಂದ (ಸ್ವಾಮಿ ತುರೀಯಾನಂದರು) ಕೇಳಿ ತಿಳಿದಿದ್ದೆ, ಶ್ರೀಮಾತೆಯವರು ಯಾವಾಗಲೂ ಸಮಾಧಿ ಅವಸ್ಥೆಯಲ್ಲೇ ಇರುತ್ತಿದ್ದರು; ಹಾಗಿದ್ದೂ ಅವರು ಬಾಹ್ಯ ಚಟುವಟಿಕೆಗಳನ್ನೆಲ್ಲ ಮಾಡುತ್ತಿದ್ದರು. ಅವರ ಮನಸ್ಸು ವಿಶುದ್ಧ ಚಕ್ರದಿಂದ ಕೆಳಕ್ಕೆ ಇಳಿಯುತ್ತಿರಲಿಲ್ಲ. ಇದೇ ವಿಶೇಷವಾಗಿ ಆಶ್ಚರ್ಯದ ಸಂಗತಿ!'

ಒಂದು ದಿನ ಬಾಬುರಾಮ್ ಮಹಾರಾಜರು (ಸ್ವಾಮಿ ಪ್ರೇಮಾನಂದರು) ಬಾಗ್‌ಬಜಾರಿನಲ್ಲಿರುವ 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಬಂದರು. ಅವರೊಂದಿಗೆ ರಾಜಾ ಮಹಾರಾಜರ (ಸ್ವಾಮಿ ಬ್ರಹ್ಮಾನಂದರು) ಸೇವಕರಾದ ಸ್ವಾಮಿ ವರದಾನಂದರೂ ಇದ್ದರು. 'ಶ್ರೀಮಾತೆಯವರ ಮನೆ' ಯನ್ನು ಪ್ರವೇಶಿಸುವ ಮೊದಲು ಬಾಬುರಾಮ್ ಮಹಾರಾಜರು ಹೊಸ್ತಿಲಿಗೆ ತಲೆ ಮುಟ್ಟಿಸಿ ಪ್ರಣಾಮ ಮಾಡಿದರು. ವರದಾನಂದ ಸ್ವಾಮಿಯವರಿಗೂ ಹಾಗೆ ಮಾಡಲು ಅವರು ಹೇಳಿದರು. ಸ್ವಾಮಿ ವರದಾನಂದರು ಹಿಂದೆ ಮುಂದೆ ನೋಡುತ್ತಿದ್ದುದನ್ನು ನೋಡಿ ಬಾಬುರಾಮ ಮಹಾರಾಜರು ಹೇಳಿದರು: ''ಅರೇ, ಹುಡುಗ-ಮೇಲೆ ಯಾರಿದ್ದಾರೆ ಗೊತ್ತೆ? ಈ ಬಾರಿ ಅವರು ಎರಡು ಕೈಗಳನ್ನು ಹಾಗೂ ಮುಂಡಮಾಲಾ ಇವನ್ನು ಬಿಟ್ಟು ಬಂದಿದ್ದಾರೆ-ಹಾಗಾಗಿ ನಿನಗೆ ಗೊತ್ತಾಗುತ್ತಿಲ್ಲ!''

ಬಾಲ್ಯಕಾಲದಲ್ಲಿ ನನ್ನ ತಂದೆ ಹಾಗೂ ತಾಯಿಯವರೊಂದಿಗೆ 'ಶ್ರೀಮಾತೆಯವರ ಮನೆ'ಗೆ ಹೋಗಿ, ಶ್ರೀಮಾತೆಯವರ ದರ್ಶನ ಹಾಗೂ ಪಾದಸ್ಪರ್ಶ ಮಾಡುವ ಸೌಭಾಗ್ಯ ನನಗೆ ೨-೩ ಬಾರಿ ದೊರಕಿತ್ತು. ಒಂದು ಸಲ ನಾನು 'ಶ್ರೀಮಾತೆಯವರ ಮನೆ'ಯಲ್ಲಿ ಕಲ್ಲಿನ ಮೆಟ್ಟಿಲ ಮೂಲಕ ಮೇಲಂತಸ್ತಿಗೆ ಹೋಗಿ, ಎಡಭಾಗದ ಕೋಣೆಯಲ್ಲಿ ನನ್ನ ತಾಯಿಯ ಬಳಿ ಕುಳಿತು, ಉಳಿದ ಭಕ್ತೆಯರೊಂದಿಗೆ ಪ್ರಸಾದ ಸ್ವೀಕರಿಸಿದ್ದು ನನಗೆ ನೆನಪಿದೆ. ಪ್ರಸಾದ ತಿನ್ನುವುದು ಮುಗಿಯುತ್ತ ಬಂದಿತ್ತು. ಹಠಾತ್ತನೆ ಶ್ರೀಮಾತೆಯವರು ಒಂದು ಸಣ್ಣ ತಟ್ಟೆಯಲ್ಲಿ ಸಂದೇಶ (ಸಿಹಿತಿಂಡಿ)ದೊಂದಿಗೆ ಕೋಣೆಯೊಳಕ್ಕೆ ಬಂದು, ಎಲ್ಲರ ಎಲೆಗೆ ಸಂದೇಶವನ್ನು ವಿತರಿಸಿ, ಎಲ್ಲರನ್ನೂ ಧನ್ಯರನ್ನಾಗಿಸಿದರು,

ಸ್ವಾಮಿ ಅಪೂರ್ವಾನಂದರಿಂದ ಕೇಳಿದ್ದೆ : ಶ್ರೀಮಾತೆಯವರು ಕಾಶಿಯಲ್ಲಿ 'ಲಕ್ಷ್ಮೀ ನಿವಾಸ'ದಲ್ಲಿದ್ದಾಗ, ಒಂದು ದಿನ ಬೆಳಗಿನ ಹೊತ್ತು ತಮ್ಮದೇ ಒಂದು ಫೋಟೋವನ್ನು ಕೈಯಲ್ಲಿ ಹಿಡಿದುಕೊಂಡು ಮೇಲಂತಸ್ತಿನಿಂದ ಕೆಳಗೆ ಇಳಿದುಬಂದಿದ್ದರು. ಬಳಿಕ ಹೂವಿನ ತೋಟದಿಂದ ಸ್ವಲ್ಪ ಹೂಗಳನ್ನು ಆರಿಸಿ ತಮ್ಮ ಸೆರಗಿನಲ್ಲಿ ಕಟ್ಟಿಕೊಂಡರು. 'ಲಕ್ಷ್ಮೀನಿವಾಸ'ದಿಂದ ಅದ್ವೈತ ಆಶ್ರಮಕ್ಕೆ ಹೋಗಿ, ತಮ್ಮ ಫೋಟೋವನ್ನು ಅಲ್ಲಿನ ದೇವಾಲಯದಲ್ಲಿದ್ದ ಶ್ರೀರಾಮಕೃಷ್ಣರ ಫೋಟೋದ ಬಳಿಯಲ್ಲಿ ಇಟ್ಟು, ಎರಡೂ ಫೋಟೋಗಳಿಗೆ ಹೂಗಳನ್ನು ಅರ್ಪಿಸಿ ಪ್ರಣಾಮ ಮಾಡಿದರು. ಬಳಿಕ ಮಹಾಪುರುಷ ಮಹಾರಾಜರನ್ನು (ಸ್ವಾಮಿ ಶಿವಾನಂದರು) ಕರೆದು ಶ್ರೀಮಾತೆ ಹೇಳಿದರು: ''(ತಮ್ಮ ಫೋಟೋವನ್ನು ತೋರಿಸಿ) ಈ ಚಿತ್ರಕ್ಕೂ ಪ್ರತಿದಿನ ಎರಡು ಹೂಗಳನ್ನು ನೀಡು.'' ಮುಂದೆ ಮಹಾಪುರುಷ ಮಹಾರಾಜರ ಸೇವಕರಲ್ಲಿ ಒಬ್ಬರಾಗಿದ್ದ ಸ್ವಾಮಿ ಅಪೂರ್ವಾನಂದರು ಮಹಾಪುರುಷ ಮಹಾರಾಜರಿಂದಲೇ ಈ ಘಟನೆಯನ್ನು ಕೇಳಿದ್ದರು.

೧೯೨೦ರ ಜುಲೈ ೨೧ರಂದು ರಾತ್ರಿ ಒಂದೂವರೆ ಗಂಟೆಗೆ ಶ್ರೀಮಾತೆ ಇಹಲೋಕವನ್ನು ತ್ಯಜಿಸಿದರು. ಸ್ವಲ್ಪ ಹೊತ್ತಿನಲ್ಲೇ ಕೃಷ್ಣಲಾಲ್ ಮಹಾರಾಜ್ (ಸ್ವಾಮಿ ಧೀರಾನಂದರು) ಈ ವಿಷಯವನ್ನು ನನ್ನ ತಂದೆ ಕಿರಣಚಂದ್ರರಿಗೆ ತಿಳಿಸಲು 'ಲಕ್ಷ್ಮೀ ನಿವಾಸ'ಕ್ಕೆ ಬಂದರು. ಆಗ ಕಿರಣಚಂದ್ರರು ಅತ್ಯಂತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಅವರ ಅಣ್ಣ ಹರಿಪದ ದತ್ತರಿಂದ ಕಿರಣಚಂದ್ರರ ಈ ವಿಷಯವನ್ನು ಕೇಳಿ ತಿಳಿದ ಕೃಷ್ಣಲಾಲ್ ಮಹಾರಾಜ್ ಯಾರಿಗೂ ಏನನ್ನೂ ಹೇಳದೆ ಹೊರಟು ಹೋದರು. ಮರುದಿನ ಬೆಳಿಗ್ಗೆ ಅವರು ಮತ್ತೆ ಬಂದು, ಕಿರಣಚಂದ್ರರಿಗೆ ಈ ಮರ್ಮಘಾತುಕವಾದ ದುಃಖವಾರ್ತೆಯನ್ನು ತಿಳಿಸಿದರು. ಅದರೊಂದಿಗೆ ದತ್ತಕುಟುಂಬದಲ್ಲಿ ದುಃಖದ ದಟ್ಟವಾದ ಕರಿನೆರಳು ಕವಿಯಿತು, ಶ್ರೀಮಾತೆಯವರ ಅಂತ್ಯಕ್ರಿಯೆಗೆ ಬೇಕಾದ ಶ್ರೀಗಂಧದ ಕಟ್ಟಿಗೆ ಹಾಗೂ ತುಪ್ಪವನ್ನು ಖರೀದಿಸಲು ಬೇಕಾದ ಹಣವನ್ನು ಕಿರಣಚಂದ್ರರು ಕೃಷ್ಣಲಾಲ್ ಮಹಾರಾಜರಿಗೆ ಕೊಟ್ಟರು. ಕೃಷ್ಣಲಾಲ್ ಮಹಾರಾಜ್ ಹೊರಟುಹೋದರು.

ಕಿರಣಚಂದ್ರರು ತಮ್ಮ ಅಣ್ಣನಿಗೆ ಹೇಳಿದರು: ''ಮನೆಯವರೆಲ್ಲರೂ ಹೋಗಿ ಶ್ರೀಮಾತೆಯವರಿಗೆ ಅಂತಿಮ ಪ್ರಣಾಮ ಸಲ್ಲಿಸಿ ಬರಲಿ. ಮನೆಯಲ್ಲಿ ಎಲ್ಲರೂ ಮೂರು ದಿನ ಸೂತಕವನ್ನು ಆಚರಿಸಲಿ.'' ಅವರ ನಿರ್ದೇಶನದಂತೆ ದತ್ತರ ಮನೆಯ ಬಾಲಕರು, ವೃದ್ಧರು, ಸ್ತ್ರೀಯರು ಸೇರಿದಂತೆ ಎಲ್ಲರೂ ಶ್ರೀಮಾತೆಯವರಿಗೆ ಅಂತಿಮ ಪ್ರಣಾಮ ಮಾಡಲು ಹೋದರು. ಆಗ ನನ್ನ ವಯಸ್ಸು ಸುಮಾರು ಹತ್ತು. ಮನೆಯವರೊಂದಿಗೆ ನಾನೂ